# ಸಾಕ್ರೆಟಿಸ್ ಮತ್ತು ಧರ್ಮ

ಗ್ರೀಕ್ ತತ್ವಜ್ಞಾನಿ ಸಾಕ್ರೆಟಿಸ್‌ನ ಬಗ್ಗೆ ತಿಳಿಯದಿರುವವರು ಕಡಿಮೆ. ಕ್ರಿ.ಪೂ. 2400ರಲ್ಲಿ ಮನುಷ್ಯ ಸಮಾಜವನ್ನು ಕುರಿತು ಜಿಜ್ಞಾಸೆ ನಡೆಸುತ್ತಿದ್ದ ಆತ ಬುದ್ಧನಿಗಿಂತಲೂ ಎರಡು ಶತಮಾನಗಳ ನಂತರದವನು. ಅಂದಿನ ಕಾಲದಲ್ಲಿ ಸಂಪರ್ಕ, ಸಂವಹನ ಸುಲಭವಾಗಿದ್ದಿಲ್ಲದ ಕಾರಣ, ಒಂದಕ್ಕೊಂದು ಸಂಬಂಧಪಡದೆ, ಜಗತ್ತಿನ ಬೇರೆಬೇರೆ ಭಾಗಗಳಲ್ಲಿ ಬೇರೆಬೇರೆ ಕಾಲಘಟ್ಟಗಳಲ್ಲಿ ನಾಗರಿಕತೆಗಳು ಬೆಳೆಯುತ್ತಿದ್ದವು. ಗ್ರೀಕ್ ನಾಗರಿಕತೆಯು ಸಿಂಧೂ ಕಣಿವೆಯ ನಾಗರಿಕತೆಯಂತೆಯೆ ಪುರಾತನವಾದದ್ದು. ಆಶ್ಚರ್ಯವೆಂದರೆ ಸಾಕ್ರೆಟಿಸ್ ಬುದ್ಧನಂತೆಯೆ ಚಿಂತಿಸುತ್ತಿದ್ದ. ಅಪಾರ ಹಿಂಬಾಲಕರಿದ್ದರು. ಅವನ ಮಾತುಗಳನ್ನು ಕೇಳಲು, ತರ್ಕಿಸಲು ಜನರು ತವಕಪಡುತ್ತಿದ್ದರು. ಸಾಕ್ರೆಟೀಸನ ತಂದೆ ಒಬ್ಬ ಶಿಲ್ಪಿ, ತಾಯಿ ಸೂಲಗಿತ್ತಿ. ಸ್ವಲ್ಪಕಾಲ ಸಾಕ್ರೆಟಿಸ್ ತಂದೆಯ ವೃತ್ತಿಯನ್ನೆ ಮಾಡುತ್ತಿದ್ದ. ಅಂತಹ ಪ್ರಖ್ಯಾತ ಹಿನ್ನೆಲೆಯಿಲ್ಲದ ಈ ವ್ಯಕ್ತಿ ತನ್ನ ಮಾತುಗಾರಿಕೆಯಿಂದಲೇ ಎಲ್ಲರನ್ನೂ ಆಕರ್ಷಿಸುತ್ತಿದ್ದ. ಯೋಧರು, ವೃದ್ಧರು, ಯುವಕರು, ಬಡವರು, ತತ್ವಾನ್ವೇಷಕರು, ಧನಿಕರು, ವ್ಯಾಪಾರಿಗಳು ಎಲ್ಲರೂ ಇವನ ಮಾತನ್ನು ಶ್ರದ್ಧೆಯಿಂದ ಕೇಳುತ್ತಿದ್ದರು. ಅವನು ಖಂಡಿತವಾದಿಯಾಗಿದ್ದ. ಅವನು ಜನರ ವಿರೋಧ ಕಟ್ಟಿಕೊಳ್ಳಲು ಹೆದರುತ್ತಿರಲಿಲ್ಲ. ತಾನು ಯಾರಿಗೂ ಏನನ್ನೂ ಬೋಧಿಸಲಾರೆನೆಂದು ಹೇಳುತ್ತಿದ್ದ. ಆದರೂ ಮಾನವೇತಿಹಾಸದ ಆರಂಭಿಕ ಪರ್ವ ಇಂಥವರ ಆತ್ಮಗಾಥವೇ ಆಗಿದೆ. ಮುಂದೆ ಬರುವ ಪ್ಲೇಟೋ, ಅರಿಸ್ಟಾಟಲ್ ಮುಂತಾದವರಿಗೆ ಸಾಕ್ರೆಟಿಸ್ ಗುರುಸಮಾನನಾಗಿದ್ದ. ತತ್ವಶಾಸ್ತ್ರವನ್ನೊಳಗೊಂಡಂತೆ ಅನೇಕ ಜ್ಞಾನಶಾಖೆಗಳಲ್ಲಿ ಚಿಂತನೆಯ ಬೀಜಗಳನ್ನು ನಾಟಿಮಾಡಿ ಹೊರಟ. 'ನಿನ್ನನ್ನು ನೀನು ತಿಳಿದುಕೊ' ಎಂಬುದೇ ಅವನ ಧ್ಯೇಯವಾಕ್ಯ.

ಕೊನೆಗಾಲದಲ್ಲಿ ಸಾಕ್ರೆಟಿಸ್‌ನ ಮೇಲೆ ಒಂದು ಆಪಾದನೆಯನ್ನು ಹೊರಿಸಲಾಗುತ್ತದೆ. ಅದು ಸಾಕ್ರೆಟೀಸನು ಹೊಸ ದೇವತೆಗಳನ್ನು ಸೃಷ್ಟಿಸುತ್ತಿದ್ದಾನೆ, ಅಧರ್ಮಿಯಾಗುತ್ತಿದ್ದಾನೆ ಮತ್ತು ಯುವಕರನ್ನು ತಪ್ಪು ದಾರಿಗೆಳೆಯುತ್ತಿದ್ದಾನೆ ಎನ್ನುವುದಾಗಿತ್ತು. ತನ್ನನ್ನು ವಿಚಾರಣೆಗೆ ಒಳಪಡಿಸುವ ಮುನ್ನ ಆಗಲೇ ಜ್ಞಾನಿಯೆಂದು ಹೆಸರುಮಾಡಿದ್ದ ತನಗಿಂತಲೂ ಕಿರಿಯನಾದ ಯೂಥಿಫ್ರೊನನ್ನು ಭೇಟಿಮಾಡುತ್ತಾನೆ. ಧರ್ಮವೆಂದರೇನು ಎಂಬ ಇವನ ವ್ಯಾಖ್ಯಾನವನ್ನು ಯೂಥಿಫ್ರೊ ಒಪ್ಪಿಕೊಂಡರೆ ನ್ಯಾಯಾದೀಶರನ್ನು ಒಪ್ಪಿಸಿದಂತೆಯೆ ಎಂಬುದು ಇವನ ತಿಳಿವಳಿಕೆಯಾಗಿತ್ತು. ಮೇಲಾಗಿ ಯೂಥಿಫ್ರೊ ಕೊಲೆಯಲ್ಲದ ಕೊಲೆಯ ಆಪಾದನೆ ಹೇರಿ ತನ್ನ ತಂದೆಯ ಮೇಲೆಯೆ ಮೊಕದ್ದಮೆ ಹೂಡಿರುತ್ತಾನೆ. ಸಾಕ್ರೆಟೀಸನಿಗೆ ಯೂಥಿಫ್ರೊ ಧರ್ಮಿಷ್ಠನೇ ಇರಬೇಕು ಎಂದು ನಂಬಿಕೆ ಬರಲು ಇದೂ ಒಂದು ಕಾರಣ.

ಧರ್ಮದ ಸಾಮಾನ್ಯ ಗುಣವೇನೆಂದು ವಿವರಿಸು ಯೂಥಿಫ್ರೊ, ಅಧರ್ಮ ಯಾವುದೆಂದು ನಿಶ್ಚಯಿಸಲು ಅನುಕೂಲವಾಗುವುದು ಎಂದು ಕೇಳುತ್ತಾನೆ. ಅದಕ್ಕೆ ಯೂಥಿಫ್ರೊ, 'ದೇವತೆಗಳಿಗೆ ಯಾವುದು ಪ್ರಿಯವಾಗುವುದೋ ಅದು ಧರ್ಮ, ಅವರಿಗೆ ಯಾವುದು ಅಪ್ರಿಯವೋ ಅದು ಅಧರ್ಮ'! ಎಂದು ಹೇಳುತ್ತಾನೆ. ಬೇಸ್ತು ಬಿದ್ದ ಸಾಕ್ರೆಟಿಸ್ ದೇವತೆಗಳಲ್ಲಿಯೂ ದ್ವೇಷಾಸೂಯೆಗಳು, ಪಕ್ಷಪ್ರತಿಪಕ್ಷಗಳು, ಭಿನ್ನಾಭಿಪ್ರಾಯಗಳು ಉಂಟೆಂದು ಒಪ್ಪಿಕೊಳ್ಳುವುದಾದರೆ, ಅವರು ಜಗಳವಾಡಿದರೆ ಇಂತಹ ವಿಷಯಗಳಲ್ಲಿ ತಾನೆ? ಹಾಗಾದರೆ, ಒಂದೇ ವಿಷಯದಲ್ಲಿ ದೇವತೆಗಳಿಗೆ ಭಿನ್ನಾಭಿಪ್ರಾಯ ಉಂಟಾಗಬಹುದು. ಕೆಲವರಿಗೆ ಒಳ್ಳೆಯದಾದದ್ದು, ಉಚ್ಚವಾದದ್ದು ಮತ್ತೆ ಕೆಲವರಿಗೆ ನೀಚವಾದದ್ದು, ಕೆಟ್ಟದ್ದಾಗಿರಬಹುದು. ಹಾಗಾದರೆ ನೀನು ಹೇಳುವಹಾಗೆ ಒಂದೇ ವಿಷಯವು ಅಥವಾ ಪದಾರ್ಥವು ಧರ್ಮವೂ ಆಗಬಹುದು, ಅಧರ್ಮವೂ ಆಗಬಹುದು. ಸಾಕ್ರೆಟೀಸನ ಈ ವಾದಕ್ಕೆ ವಿಚಲಿತನಾದ ಯೂಥಿಫ್ರೊ ಒಂದು ತಿದ್ದುಪಡಿಯನ್ನು ಸೂಚಿಸುತ್ತಾನೆ. 'ಎಲ್ಲಾ ದೇವತೆಗಳಿಗೂ ಪ್ರಿಯವಾದದ್ದು ಧರ್ಮ, ಅಪ್ರಿಯವಾದದ್ದು ಅಧರ್ಮ'!

ಈ ಲಕ್ಷಣವನ್ನು ಸಾಕ್ರೆಟಿಸ್ ಮತ್ತೆ ಪರೀಕ್ಷೆಗೆ ಒಳಪಡಿಸುತ್ತಾನೆ. ಧರ್ಮವು ಧರ್ಮವಾಗಿರುವುದರಿಂದ ದೇವತೆಗಳು ಅದನ್ನು ಪ್ರೀತಿಸುತ್ತಾರೆಯೆ ಅಥವಾ ದೇವತೆಗಳು ಪ್ರೀತಿಸುವುದರಿಂದ ಅದು ಧರ್ಮವೆನ್ನಿಸಿಕೊಳ್ಳುವುದೆಯೇ? ಇದನ್ನು ಹೇಗೆ ಮತ್ತಷ್ಟು ಸ್ಪಷ್ಟಪಡಿಸುತ್ತಾನೆ ನೋಡಿ. ಒಂದು ಪದಾರ್ಥ ನೋಡಲ್ಪಡುತ್ತಿರುವುದಕ್ಕೆ ಅದು ನೋಡಲ್ಪಡುವ ಸ್ಥಿತಿಯಲ್ಲಿರುವುದು ಕಾರಣವಲ್ಲ; ನೋಡಲ್ಪಡುತ್ತಿರುವುದು ನೋಡಲ್ಪಡುವ ಸ್ಥಿತಿಯಲ್ಲಿರುವುದಕ್ಕೆ ಕಾರಣ. ನಡೆಸಲ್ಪಡುತ್ತಿರುವುದಕ್ಕೆ ಅದು ನಡೆಸಲ್ಪಡುವ ಸ್ಥಿತಿಯಲ್ಲಿರುವುದು ಕಾರಣವಲ್ಲ; ನಡೆಸಲ್ಪಡುತ್ತಿರುವುದು ನಡೆಸಲ್ಪಡುವ ಸ್ಥಿತಿಯಲ್ಲಿರುವುದಕ್ಕೆ ಕಾರಣ. ನನ್ನ ಅರ್ಥ ಸ್ಪಷ್ಟವಾಯಿತೆ, ಯೂಥಿಫ್ರೊ? ಒಂದು ಪದಾರ್ಥವು ಏನೋ ಒಂದು ಪರಿಣಾಮ ಹೊಂದಿದರೆ ಅದು ಹಾಗೆ ಆಗುವುದಕ್ಕೆ ಪರಿಣಾಮಹೊಂದಿದ ಸ್ಥಿತಿ ಕಾರಣವಲ್ಲ; ಪರಿಣಾಮ ಹೊಂದುವುದೇ ಪರಿಣಾಮಹೊಂದಿದ ಸ್ಥಿತಿಗೆ ಕಾರಣ. ಈ ವಾದವನ್ನು ಯೂಥಿಫ್ರೊ ಒಪ್ಪುತ್ತಾನೆ. ಹಾಗಾದರೆ, ಒಂದು ವಸ್ತುವು ಪ್ರೀತಿಸಲ್ಪಡುತ್ತಿರುವುದು ಅದು ಪ್ರೀತಿಸಲ್ಪಡುತ್ತಿರುವ ಸ್ಥಿತಿಯಲ್ಲಿರುವುದರಿಂದಲ್ಲ; ಅದನ್ನು ಪ್ರೇಮಿಗಳು ಪ್ರೀತಿಸುತ್ತಿರುವುದರಿಂದ ಪ್ರೀತಿಸಲ್ಪಡುತ್ತಿರುವ ಸ್ಥಿತಿಯಲ್ಲಿರುತ್ತದೆ. ಹಾಗೆಯೆ, ಈ ಲಕ್ಷಣದ ಪ್ರಕಾರ ಧರ್ಮವೆಂದರೆ ದೇವತೆಗಳಿಗೆ ಪ್ರಿಯವಾದದ್ದು ಎಂದಲ್ಲ, ದೇವತೆಗಳಿಗೆ ಪ್ರಿಯವಾದದ್ದು ಧರ್ಮವೆಂದೂ ಅಲ್ಲ, ಅವು ಬೇರೆಬೇರೆ ವಸ್ತುಗಳು. ದೇವತೆಗಳು ಧರ್ಮವನ್ನು ಪ್ರೀತಿಸುವುದು ಅದು ಧರ್ಮವಾದ್ದರಿಂದ. ಧರ್ಮವಾದದ್ದು– ಧರ್ಮ– ಎಂದರೆ ಏನು? ಇನ್ನೂ ಸ್ಪಷ್ಟವಾಗಲಿಲ್ಲ. ಯಾಗ ಮತ್ತು ಸ್ತೋತ್ರ ಇವುಗಳ ಶಾಸ್ತ್ರವೆ? ಯೂಥಿಫ್ರೊಗೆ ಮತ್ತೆ ಪ್ರಶ್ನೆ ಹಾಕುತ್ತಾನೆ. ಯಾಗವೆಂದರೆ ದೇವತೆಗಳಿಗೆ ಕೊಡುವುದು, ಸ್ತೋತ್ರವೆಂದರೆ ದೇವತೆಗಳಿಂದ ಬೇಡುವುದು. ಹಾಗಾದರೆ ಧರ್ಮವೆಂದರೆ ದೇವರಿಂದ ಬೇಡುವ ಮತ್ತು ದೇವರಿಗೆ ಕೊಡುವ ಶಾಸ್ತ್ರವೆ? ಅಂತಿಮವಾಗಿ ಧರ್ಮ ದೇವತೆಗಳ ಮತ್ತು ಮನುಷ್ಯರ ನಡುವೆ ನಡೆಯುವ ಒಂದು ವ್ಯಾಪಾರ ಎಂಬ ತೀರ್ಮಾನಕ್ಕೆ ಬರುತ್ತಾನೆ.

ನ್ಯಾಯವಿರುವ ಕಡೆಯಲ್ಲೆಲ್ಲಾ ಧರ್ಮ ಇರುವುದೆ? ಧರ್ಮ ಎಲ್ಲೆಲ್ಲಿರುವುದೋ ಅಲ್ಲೆಲ್ಲಾ ನ್ಯಾಯ ಇರುವುದಾದರೂ, ನ್ಯಾಯ ಎಲ್ಲೆಲ್ಲಿರುವುದೋ ಅಲ್ಲೆಲ್ಲಾ ಧರ್ಮವಿರುವುದಿಲ್ಲ. ಏಕೆಂದರೆ ಧರ್ಮ ನ್ಯಾಯದ ಒಂದು ಭಾಗ ಮಾತ್ರ. ಭಯವಿದ್ದಕಡೆ ಭಕ್ತಿಯೂ ಇರುತ್ತದೆ ಎನ್ನುವುದು ನಿಜವಲ್ಲ, ರೋಗ, ಬಡತನ ಮೊದಲಾದ ಹಾನಿಗಳಿಗೆ ಹೆದರುವ ಜನರಲ್ಲಿ ಭಯವೇನೋ ಕಂಡುಬರುವುದು ಆದರೆ ಅವುಗಳ ವಿಷಯದಲ್ಲಿ ಭಕ್ತಿ ಇರುವಂತೆ ತೋರುವುದಿಲ್ಲ. ಆದರೆ ಭಕ್ತಿ ಇರುವ ಕಡೆ ಭಯವೂ ಇರುತ್ತದೆ. ಭಕ್ತಿ ಭಯದ ಜೊತೆ ಸರ್ವದಾ ಇರುವುದಿಲ್ಲ. ಏಕೆಂದರೆ, ಭಯ ಭಕ್ತಿಗಿಂತಲೂ ವಿಶಾಲವಾದದ್ದು. ಬೆಸವು ಸಂಖ್ಯೆಯ ಒಂದು ಭಾಗವಲ್ಲವೆ? ಬೆಸವಿದ್ದಲ್ಲಿ ಸಂಖ್ಯೆ ಇದ್ದೇ ಇರಬೇಕು; ಆದರೆ ಸಂಖ್ಯೆ ಇದ್ದಲ್ಲಿ ಬೆಸವು ಇದ್ದೇ ಇರಬೇಕೆಂಬ ನಿರ್ಬಂಧವಿಲ್ಲ. ಹೀಗೆಯೆ ಭಕ್ತಿ ಭಯದ ಒಂದು ಭಾಗ. ಇಂತಹ ಕೂದಲು ಸೀಳುವ ತರ್ಕಕ್ಕೆ ಸಾಕ್ರೆಟಿಸ್ ಹೆಸರುವಾಸಿಯಾಗಿದ್ದ.

■ ಮೂಚಿ

## ಮಾತೇ ಮುತ್ತು

★ ಬೆಂಕಿಯಿಲ್ಲದೆ ಮೇಣದಬತ್ತಿ ಉರಿಯುವುದಿಲ್ಲ. ಹಾಗೆಯೇ ಆಧ್ಯಾತ್ಮಿಕ ಜೀವನವಿಲ್ಲದೆ ಮನುಷ್ಯ ಬದುಕಲಾರ.

-ಗೌತಮ ಬುದ್ಧ

★ ಜೀವನದ ಭಯದಿಂದಲೇ ಸಾವಿನ ಭಯವೂ ಹುಟ್ಟುವುದು. ಜೀವನವನ್ನು ಸಂಪೂರ್ಣವಾಗಿ ಜೀವಿಸುವವನು ಸಾಯಲು ಸದಾ ಸಿದ್ಧನಾಗಿರುತ್ತಾನೆ.

-ಮಾರ್ಕ್ ಟ್ವೈನ್

★ ಶಿಕ್ಷಣ ಎನ್ನುವುದು ಅತ್ಯಂತ ಶಕ್ತಿಶಾಲಿ ಆಯುಧ. ಅದರ ಮೂಲಕ ಜಗತ್ತನ್ನು ಬದಲಿಸಬಹುದು.

-ನೆಲ್ಸನ್ ಮಂಡೇಲ

★ ದುಃಖದ ಮೌನ ಭಾಷೆಯೇ ಕಣ್ಣೀರು.

-ವಾಲ್ಟೇರ್

★ ನಿಮಗೆ ಶತ್ರುಗಳಿದ್ದಾರಾ? ತುಂಬ ಒಳ್ಳೆಯದು. ಅದರ ಅರ್ಥ ಜೀವನದಲ್ಲಿ ನೀವು ಯಾವತ್ತೋ ಒಂದು ಸಲ ಒಳ್ಳೆಯದಕ್ಕಾಗಿ ಎದ್ದು ನಿಂತಿದ್ದೀರಿ.

-ವಿನ್‌ಸ್ಟನ್ ಚರ್ಚಿಲ್

★ ಈ ಜಗತ್ತೆನ್ನುವುದು ನಮ್ಮನ್ನು ನಾವು ಗಟ್ಟಿಗೊಳಿಸಲೆಂದೇ ಇರುವ ವ್ಯಾಯಾಮಶಾಲೆ.

-ಸ್ವಾಮಿ ವಿವೇಕಾನಂದ